# ಮೇ ಹೂವು

ಮೇ ಹೂವು ನೋಡಲು ಗುಲಾಬಿ ಹಳದಿ ಬಣ್ಣದಲ್ಲಿ ಕೆದರಿದ ತಾವರೆಯಂತೆ ಕಾಣುತ್ತದೆ. ಇದನ್ನು ಮೇ ಹೂವು ಎಂದು ಕರೆಯುವರು. ಏಕೆಂದರೆ ಈ ಹೂವು ವರ್ಷಕ್ಕೆ ಒಂದೇ ಬಾರಿ ಅರಳುತ್ತದೆ. ಅದೂ ಮೇ ತಿಂಗಳಲ್ಲಿ ಮಾತ್ರ. ಮಂಡ್ಯ ಜಿಲ್ಲೆಯ ಹೊಸಬೂದನೂರು ನನ್ನ ಅತ್ತೆ ಮನೆಯ ಕೈತೋಟದಲ್ಲಿ ಈ ಹೂವು  ಕಾಣಿಸಿತು. ನೆಲದಿಂದ ಮೇಲೆಳುವಾಗ ತಾವರೆ ಮೊಗ್ಗಿನಂತೆ ಕಾಣುತ್ತದೆ. ಅರಳಿದಾಗ ಮಾತ್ರ ಮೇ ಹೂವು ಎಂದು ತಿಳಿಯುತ್ತದೆ. ಸುಮಾರು ಮೂರರಿಂದ ನಾಲ್ಕು ಹೂವುಗಳನ್ನು ಬಿಡುತ್ತದೆ. ಹೂವು ಮಾತ್ರ ಬೇಗ ಒಣಗುವುದಿಲ್ಲ. ಅದು ಅರಳಿದ ಮೇಲೆ ಎಲೆಗಳು ಹುಟ್ಟುವುದು ಈ ಸಸ್ಯದ ವಿಶೇಷ ಗುಣ. ನೋಡುಗರನ್ನು ತನ್ನತ್ತ ಸೆಳೆಯುವ ಈ ಹೂವನ್ನು ಕತ್ತರಿಸಿ ನೀರು ತುಂಬಿದ ಬಾಟಲಿಯಲ್ಲಿ ಸಂಗ್ರಹಿಸಿ ಇಟ್ಟರೆ, ಅನೇಕ ದಿನಗಳ ತನಕ ಅದರ ತಾಜಾ ಸೌಂದರ್ಯವನ್ನು ಸವಿಯಬಹುದು.

–ಸೌಮ್ಯಾ ಪುರುಷೋತ್ತಮ್, ಮದ್ದೂರು





# ಮರ ಕರಿಬೇವು

ನಮ್ಮ ಮನೆಯ ಪಕ್ಕದಲ್ಲಿ ಕರಿಬೇವಿನ ಗಿಡ ಮರ ಆಗಿಬಿಟ್ಟಿದೆ. ದೂರದಿಂದ ನೋಡಿದರೆ ಇದು ಬೇವಿನ ಮರದ ಥರ ಕಾಣುತ್ತದೆ. ಹತ್ತಿರ ಹೋಗಿ ನೋಡಿದರೆ ಮಾತ್ರ ಅಸಲೀಯತ್ತು ತಿಳಿಯುತ್ತದೆ. ನಾವು ಮರಹತ್ತಿ ಕರಿಬೇವನ್ನು ಕಡಿದುಕೊಳ್ಳುತ್ತೇವೆ. ಇಷ್ಟು ಎತ್ತರಕ್ಕೆ ಕರಿಬೇವು ಗಿಡ ಬೆಳೆಯೋದು ಬಹಳ ವಿರಳ. ನಾವು ಕರಿಬೇವು ಉಪಯೋಗ ಮಾಡುತ್ತಾ ಹೋದಂತೆ ಗಿಡ ಕುಬ್ಜವಾಗುವುದು ಸಹಜ. ಆದರೆ ಇದು ಕರಿಬೇವನ್ನು ಕಿತ್ತು ಉಪಯೋಗಿಸುತ್ತಾ ಇದ್ದರೂ, ಎತ್ತರಕ್ಕೆ ಬೆಳೆಯುತ್ತಾ ಹೋಗಿದೆ.

–ನರಸಿಂಹಾರೆಡ್ಡಿ ಯಂಕಮೋಳ, ಸೇಡಂ

# ಪತ್ಯ ಚೀಲದಲ್ಲಿ ಹೂಗಿಡ

ಪ್ರತಿ ವರ್ಷಕ್ಕೊಮ್ಮೆ ಮಕ್ಕಳಿಗೆ ಹೊಸ ಶಾಲಾ ಚೀಲ ಬೇಕೇ ಬೇಕು. ಅದು ಗಟ್ಟಿ ಮುಟ್ಟಾಗಿದ್ದರೂ ಮುಂದಿನ ತರಗತಿಗೆ ಹೋದ ಕೂಡಲೇ ಪುಸ್ತಕ ಹಾಗೂ ಪಟ್ಟಿಗಳು ಹೆಚ್ಚಾಗುವುದರಿಂದ ದೊಡ್ಡದು ಬೇಕು. ಸುಸ್ಥಿತಿಯಲ್ಲಿದ್ದೂ ಮೂಲೆ ಸೇರುವ ಹಳೆಯ ಶಾಲಾ ಚೀಲವನ್ನು ಮನೆಯೆದುರು ಕೈತೋಟದಲ್ಲಿ ಹೂಗಿಡ ಬೆಳೆಸಲು ಬಳಸಿದ್ದಾರೆ. ಶಿರಸಿ ತಾಲ್ಲೂಕಿನ ತುಂಬೇಮನೆ ಕುಮುದಾ ಹೆಗಡೆಯವರು ಶಾಲಾ ಚೀಲದ ಹಿಡಿಕೆಗಳನ್ನು ಕತ್ತರಿಸಿ ಮಣ್ಣು ತುಂಬಿ ಗಿಡ ನೆಟ್ಟು ಹೂಗಳು ನಳ ನಳಿಸುವಂತೆ ಮಾಡಿದ್ದಾರೆ.

–ಗ.ಮ. ತುಂಬೇಮನೆ

